ಭವನದ ಸಮ್ಮೇಳನ ಸಭಾಂಗಣದಲ್ಲಿ ಬೆಳಿಗ್ಗೆ 8.00 ರಿಂದ 9.30 ಗಂಟೆಯವರೆಗೆ ಆಯೋಜಿಸಲಾಗಿದ್ದು ಇದೇ ಶಿಬಿರದಲ್ಲಿ ಆಯುರ್ವೇದಿಕ್ ವೈದ್ಯಾಧಿಕಾರಿಗಳಿಂದ ನಾಡಿ ಪರೀಕ್ಷೆಯನ್ನು ಸಹ ಏರ್ಪಡಿಸಲಾಗಿದೆಯೆಂದು ಇದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಮಾನ್ಯ ಸದಸ್ಯರುಗಳಿಗೆ ದಿನಾಂಕ 16 ನೇ ಜುಲೈ, 2007 ರ ಲಘು ಪ್ರಕಟಣೆಯಲ್ಲಿ ತಿಳಿಸಲಾಗಿರುತ್ತದೆ.

ಯೋಗಾನಂದ ಯೋಗಾಚಾರ್ಯ ಇವರು 98 ವರ್ಷ ವಯಸ್ಸಿನರಾಗಿದ್ದು ಸೂಕ್ಷ್ಮ ವ್ಯಾಯಾಮದಲ್ಲಿ ಅಪಾರ ಅನುಭವವುಳ್ಳವರಾಗಿದ್ದು ಈ ತರಬೇತಿ ಶಿಬಿರದಲ್ಲಿ ತಾವುಗಳೆಲ್ಲರೂ ಭಾಗವಹಿಸಿ ಇದನ್ನು ಉಪಯೋಗ ಪಡಿಸಿಕೊಳ್ಳಬೇಕೆಂದು ಮತ್ತೊಮ್ಮೆ ತಮ್ಮೆಲ್ಲರನ್ನು ಕೋರುತ್ತಿದ್ದೇನೆ.

ಉಪಾಧ್ಯಕ್ಷರು :– ಊಟದ ನಂತರ ಮುಂದುವರಿಸೋಣ. ಈಗ ಸದನವನ್ನು ಪುನಃ 3–30 ಕ್ಕೆ ಸೇರುವಂತೆ ಮುಂದೂಡಲಾಗುವುದು.

(ಸದನವು 2 ಗಂಟೆ 21 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸೇರುವಂತೆ ನಿಶ್ಚಯಿಸಲಾಯಿತು)

(ಸಭೆಯು 3 ಗಂಟೆ 52 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

7. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರ</u> :–

ವಿಷಯ :– <u>ವಿಧಾನಸೌಧದ 2 ನೇ ಮಹಡಿಗೆ ಬೆಂಕಿ ಬಿದ್ದಿರುವ ಬಗ್ಗೆ</u> :–

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಅಧ್ಯಕ್ಷರೆ, ವಿಧಾನಸೌಧದ 2 ನೇ ಮಹಡಿಗೆ ಭಾರಿ ಬೆಂಕಿಬಿದ್ದಿದೆ. ತಾವು ಅಲ್ಲಿಗೆ ಹೋಗಿ ನೋಡಬೇಕು. ವಿಧಾನಸೌಧ 2 ನೇ ಮಹಡಿಗೆ ತಾವು ಹೋಗಿ ಬಂದರೆ ಚೆನ್ನಾಗಿರುತ್ತದೆ. ಭಾರಿ ಭಯಂಕರವಾದಂತಹ ಬೆಂಕಿಬಿದ್ದಿದೆ. ಅದರಲ್ಲಿ ಅನೇಕ ಕಡತಗಳು ಸುಟ್ಟುಹೋಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ವಿಧಾನಸೌಧಕ್ಕೆ ಬೆಂಕಿ ಬಿದ್ದಿದೆ, ಇದನ್ನು ಆರಿಸಬೇಕಾದರೆ, ಹೊರಗಡೆಯಿಂದ ನೀರು ತರಬೇಕಾಯಿತು. ಇಲ್ಲಿ ಬೆಂಕಿಯನ್ನು ಆರಿಸುವುದಕ್ಕೆ ಯಾವ ವ್ಯವಸ್ಥೆಗಳು ಇಲ್ಲ. ಏನು ನಾವೆಲ್ಲರೂ ಒಳಗಡೆ ಕುಳಿತುಕೊಂಡು ಚರ್ಚೆ ಮಾಡುತ್ತಿದ್ದೇವೆ. ಈ ಕಡೆ ದಾಳಿಯು ಬರಲಿಲ್ಲ,

ಏನಾಗುತ್ತದೆಂದರೆ, ಇದನ್ನು ನಾವುಗಳು ಲಘುವಾಗಿ ತೆಗೆದುಕೊಳ್ಳುವಂತಹದ್ದಲ್ಲ. ಇದರಿಂದ ಏನಾದರೂ ಕೈವಾಡವಿದೆಯೇ, ಇದರ ಹಿಂದೆ ಯಾವುದಾದರೂ ಬೇರೆ ರೂಪ ಇದೆಯೇ, ಇದರ ಬಗ್ಗೆ ನಾವು ಸ್ವಲ್ಪ ಚಿಂತನೆಯನ್ನು ಮಾಡಬೇಕಾಗಿದೆ. ವಿಧಾನಸೌಧಕ್ಕೆ ಇತಿಹಾಸದಲ್ಲಿ ವಿಧಾನಸೌಧ ಕಟ್ಟಡ ಆರಂಭವಾಯಿತಲ್ಲ, ಹೆಚ್ಚು ಕಡಿಮೆ 1956 ಅಲ್ಲಿಂದ ಇಲ್ಲಿಯವರೆವಿಗೆ ಸ್ವಲ್ಪ ನೋಡಿದಾಗ ಪ್ರಪ್ರಥಮವಾಗಿ ವಿಧಾನಸೌಧಕ್ಕೆ ಬೆಂಕಿ ಬಿದ್ದಿರುವುದು. ಅದು ಏನು ಸಾಮಾನ್ಯವೇನಲ್ಲ. ಅದು ವಿದ್ಯುತ್ short circuit ಎಂದು ಕಥೆ ಹೇಳುತ್ತಿದ್ದಾರೆ. ಇರಬಹುದು ಅದನ್ನು ನಾನು ತಳ್ಳಿ ಹಾಕುತ್ತಿಲ್ಲ. ಇದರ ಬಗ್ಗೆ ಸರ್ಕಾರ ಜಾಗರೂಕತೆಯಿಂದ ಅವರು ವಿರೋಧಪಕ್ಷದವರು ಕೇಳುತ್ತಾರೆಂದು ಅದಕ್ಕೆ ತಯಾರಾಗಿರಬೇಕು ಸರ್ಕಾರ, ಮುಖ್ಯಮಂತ್ರಿಯಾಗಲಿ, ಉಪಮುಖ್ಯಮಂತ್ರಿಗಳಾಗಲಿ, ಸಂಸದೀಯ ಸಚಿವರುಗಳು, ಗೃಹ ಸಚಿವರುಗಳಾಗಲಿ ಯಾರು ಇಲ್ಲಿ ಇಲ್ಲ. ನಾವು ಹೊರಗಡೆ ನಾವುಗಳು ತಲೆಯನ್ನು ಕೆಡಿಸಿಕೊಳ್ಳುತ್ತಿದ್ದೇವೆ. ತಾವು ಬೆಂಕಿಯನ್ನು ನೋಡಿಲ್ಲ ಬಿಡಿ. ನೀವುಗಳು ಯಾರು ಕೂಡ ಅಲ್ಲಿಗೆ ಹೋಗಿಲ್ಲ. ಇಲ್ಲಿ ಕುಳಿತಿರುವ ಒಬ್ಬರಿಗೂ ಕೂಡ ಅಲ್ಲಿ ಏನಾಗಿದೆ ಎಂದು ಗೊತ್ತಿಲ್ಲ. ನಿಮಗೆ ಏನು ಗೊತ್ತಿಲ್ಲ ಏತಕ್ಕಾಗಿ ಮಾತನಾಡುವುದಕ್ಕೆ ಹೋಗುತ್ತೀರಿ. ಇವರ್ಯಾರು ಕೂಡ ಅಲ್ಲಿಗೆ ಹೋಗಿಲ್ಲ. ಇಲ್ಲಿ ಏನಾಗಿದೆ ಎಂದರೆ, ಈ ರೀತಿ ಭಯಂಕರವಾದ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಹಳ್ಳಿಗಲ್ಲಿ ಸಿಗುತ್ತೇ, ಪಟ್ಟಣ, ಜಿಲ್ಲೆಯಲ್ಲಿ ಅಲ್ಲಾ, ರಾಜ್ಯದ ರಾಜಧಾನಿ ಮತ್ತು ಮಖ್ಯಮಂತ್ರಿಯವರು ಇರತಕ್ಕಂತಹ ಶಾಸನಸಭೆ ಇದೆ. ಇಲ್ಲಿ ಬೆಂಕಿ ಬಿತ್ತು ಎಂದು ಹೇಳಿದರೆ, ಏನು ಕಾರಣ? ಸರ್ಕಾರ ಇದೆಯಾ ಇಲ್ಲಿ? ಅಧಿಕಾರಿಗಳು ಏನು ಮಡುತ್ತಿದ್ದಾರೆ? ವ್ಯವಸ್ಥೆ ಏನು? ಈ ಆಡಳಿತ ವ್ಯವಸ್ಥೆ ಏನಾಗಿದೆ. ಏನು ಸತ್ತು ಹೋಗಿದೆಯೇ? ನಿಜಕ್ಕೂ ಆಡಳಿತ ಇಲ್ಲ. ಸ್ಪಷ್ಟವಾಗಿ ಆಡಳಿತ ಇಲ್ಲ, ಆಡಳಿತ ಇದ್ದಿದ್ದರೆ ಎಲ್ಲೋ ಒಂದು ಕಡೆ ಹೊರಗಡೆ ಮೆದೆಗೆ ಬೆಂಕಿ ಬಿತ್ತು, ರೈಲ್ವೆ ನಿಲ್ದಾಣಕ್ಕೆ, ಬಸ್ ನಿಲ್ದಾಣಕ್ಕೆ ಬೆಂಕಿ ಬಿತ್ತು ಅದು ಹೋಗಲಿ, ವಿಧಾನಸೌಧಕ್ಕೆ ಬೆಂಕಿ ಬಿತ್ತು ಎಂದರೆ, ಇದಕ್ಕಿಂತ ತಲೆತಗ್ಗಿಸುವಂತಹದ್ದು ಬೇರೆ ಏನು ಇದೆ.

ಶ್ರೀ ಕೆ.ಜಿ. ಬೋಪಯ್ಯ :– ಮಾನ್ಯ ವಾಟಾಳ್ ನಾಗರಾಜ್‌ರವರು ಸರ್ಕಾರ ಇದೆಯಾ ಎಂದು ಅನಾವಶ್ಯಕವಾಗಿ ಮಾತನಾಡುತ್ತಿದ್ದಾರ. ಮಾತು ಮಾತಿಗೆ ಸರ್ಕಾರ ಇದೆಯಾ ಎಂದರೆ ಏನರ್ಥ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಇಲಾಖಾ ಸಚಿವರು) :– ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ

ಮಾಡಿದ್ದಾರೆ, ಅದು ಹಣಕಾಸು ಇಲಾಖೆ ಸಂಬಂಧಿಸಿದ ಒಂದು ಕೊಠಡಿಯಾಗಿದೆ. ಅಲ್ಲಿ ಯಾವದೇ ತರಹದ ಫೈಲುಗಳು ಇರಲಿಲ್ಲ. ಎರಡು ಕಂಪ್ಯೂಟರ್‌ಗಳು ಮಾತ್ರ ಈ short-circuit ನಿಂದ ಅನಾಹುತವಾಗಿದೆ. ಆದರೆ ಅಲ್ಲಿ ಯಾವುದೇ ಕಡತಗಳು ಇರಲಿಲ್ಲ. ಮತ್ತು ಯಾವುದೇ valuable ವಸ್ತುಗಳು ಇರಲಿಲ್ಲ. ಅಲ್ಲಿ ಯಾವುದೇ ತರಹದ ಹೆಚ್ಚಿನ ಅನಾಹುತಗಳು ಆಗಲಿಲ್ಲ. ಅದಕ್ಕಾಗಿ ಇನ್ನು ಹೆಚ್ಚಿನ ವರದಿಯನ್ನು ತರಿಸಿ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು :– ಆಯಿತು. ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ತಾವು ಮಾತನಾಡಿ.

8. ಶಾಸನ ರಚನೆ

ಪರ್ಯಾಯಲೋಚನಾ ಪ್ರಸ್ತಾಪದ ಮೇಲೆ ಮುಂದುವರೆದ ಚರ್ಚೆ 2007 ನೇ ಸಾಲಿನ ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕ

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :– ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಈ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರಗಳ ನಿಯಂತ್ರಣ ಮತ್ತು ತಿದ್ದುಪಡಿ ವಿಧೇಯಕವನ್ನು ಏನು ಸರ್ಕಾರ ಮಂಡಿಸಿದೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದು ಬಹಳ ದಿನಗಳ ಹಿಂದೆ ಪಾಸಾಗಬೇಕಾಗಿರುವಂತಹ ಬಿಲ್ ಆಗಿದೆ. ಕಳೆದ ಸದನದಲ್ಲಿಯೂ ಕೂಡ ಇದು ಮಂಡನೆಯಾಯಿತು. ಇದರ ಬಗ್ಗೆ ಚರ್ಚೆಯಾಗಲಿಲ್ಲ. ಆದರೆ ಈ ಬಿಲ್ಲು ರೈತರ ಪರ ಇದೆ, ಇದರಿಂದ ರೈತರಿಗೆ ಅನುಕೂಲವಾಗಿದೆ ಎನ್ನುವುದರಲ್ಲಿ ಎರಡು ಮಾತು ಇಲ್ಲ. ಬಹುಶಃ ತಾವು ಇರಲಿಲ್ಲ, ಈ ಸದನದಲ್ಲಿ ಈ ಬಿಲ್ಲಿನ ಬಗ್ಗೆ ಚರ್ಚೆಯಾಗುವಾಗ ನಾವು ನೋಡಿದ್ದೇವಲ್ಲಾ, ಹಿರಿಯ ಸದಸ್ಯರೂ ಕೂಡ ಅವರವರ ಅಭಿಪ್ರಾಯಗಳನ್ನು ಸಹ ಹೇಳಿದ್ದಾರೆ. ಮಾನ್ಯ ಕೃಷ್ಣ ಬೈರೇಗೌಡರು ಈ ಬಿಲ್ಲಿನ ಬಗ್ಗೆ ಬಹಳ ವಿಸ್ತಾರವಾಗಿ explanation ಕೊಟ್ಟಿದ್ದಾರೆ, ಅವರು ಇದರ ಬಗ್ಗೆ ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಇದು ಯಾವುದೇ ರೀತಿಯಾಗಿಯೂ ಕೂಡ ರೈತರಿಗೆ ಹಾನಿಯಾಗುವಂತಹದ್ದಲ್ಲ. ಇವತ್ತು ಈ ಬಿಲ್ಲಿನ ಉದ್ದೇಶವೇನು? ಎಂಬುದು ಕೂಡ ನಾವು ಅರ್ಥ ಮಾಡಿಕೊಳ್ಳ ಬೇಕಾಗುತ್ತದೆ. ಏಕೆಂದರೆ ಕೆಲವು ಜನರು ಏನು ತಪ್ಪು ಅಭಿಪ್ರಾಯಗಳಲ್ಲಿದ್ದಾರೆಂದರೆ, ಈ ಬಿಲ್ಲು ಕೇವಲ ಕೇಂದ್ರಸರ್ಕಾರದ ಮಾನ್ಯ ಶರದ್‌ಪವಾರ್‌ರವರು impose ಮಾಡುತ್ತಿದ್ದಾರೆ, ಅಥವಾ ಕೇಂದ್ರ ಸರ್ಕಾರ impose ಮಾಡುತ್ತಿದೆ ಎನ್ನುವ ತಪ್ಪು